**<u>ಸಾಕ್ಷಿಯನ್ನು ದಿನಾಂಕ 26.03.2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎಸ್ ಆರ್ ಬಿ ವಕೀಲರಿಂದಃ</u>**

ನನ್ನ ತಂದೆಯ ಹೆಸರು ಮುನಿಗಂಗಪ್ಪ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ ನಾನು ಹುಟ್ಟುವ ಸಮಯದಲ್ಲಿ ನನ್ನ ತಂದೆ ತೀರಿಕೊಂಡಿದ್ದರು. ನಾನು ಹುಟ್ಟುವ ಮೂರು ತಿಂಗಳು ಮೊದಲು ನನ್ನ ತಂದೆ ತೀರಿಕೊಂಡಿದ್ದಾರೆ. ನನಗೆ ಈಗ 65 ವರ್ಷ ವಯಸ್ಸು. ನಾನು ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ 71 ವರ್ಷ ವಯಸ್ಸು ಎಂದು ತೋರಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ನನ್ನ ತಂದೆಗೆ ಮಂಜೂರು ಆಗಿಲ್ಲ ಎಂದರೆ ಸಾಕ್ಷಿಯು ನನ್ನ ಅಣ್ಣನಿಗೆ ಮಂಜೂರು ಆಗಿದೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರು ಮುನಿಗಂಗಪ್ಪ ಅಲ್ಲ ರಾಮಪ್ಪ ಎಂದರೆ ಸರಿಯಲ್ಲ. 1996 ರಲ್ಲಿ ದಾವಾ ಸ್ವತ್ತು ಮಂಜೂರು ಆಗಿರುವ ಕಾರಣ ನನ್ನ ತಂದೆಗೆ ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ ಅದು ಗೋಮಾಳದ ಜಮೀನು. ದಾವಾ ಸ್ವತ್ತು ಸರ್ಕಾರದಿಂದ ಮಂಜೂರು ಆಗುವ 40 ವರ್ಷದ ಹಿಂದೆಯೇ ನನ್ನ ತಂದೆ ತೀರಿಕೊಂಡಿದ್ದರು ಎಂದರೆ ಸರಿಯಲ್ಲ. ನನಗೂ ಮತ್ತು ಜಮೀನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾವು ಹಕ್ಕಿಪಿಕ್ಕಿ ಜನಾಂಗದವರು ಎಂದರೆ ಸರಿ. ನಾನು ಬೆಂಗಳೂರಿನಲ್ಲಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ್ನಲ್ಲಿ ವ್ಯವಸಾಯ ಮಾಡಿದ್ದೇನೆ. ನಾನು 25 ವರ್ಷದವನಾಗಿದ್ದಾಗ ಬೆಂಗಳೂರಿಗೆ ಹೋಗಿದ್ದು ಅಲ್ಲಿಯೇ ಇದ್ದೆ. ಜಮೀನು ಮಂಜೂರು ಆಗುವ ಕಾಲಕ್ಕೂ ನಾನು

ಬೆಂಗಳೂರಿನಲ್ಲಿದ್ದೆ ಎಂದರೆ ಸರಿಯಲ್ಲ. ನನ್ನ ಅಣ್ಣನೇ ದಾವಾ ಸ್ವತ್ತು ಮಾಡುತ್ತಿದ್ದರು. ದಾವಾ ಸ್ವತ್ತಿನ ಬಗ್ಗೆ ನನಗೇನು ಗೊತ್ತಿಲ್ಲದಿದ್ದರೂ ಸುಳ್ಳು ಕೇಸು ತಂದಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಮುನಿಗಂಗಪ್ಪ ಎಂದು ತೋರಿಸಲು ಯಾವುದಾದರೂ ದಾಖಲಾತಿ ತಂದು ಕೊಡುತ್ತೀರಾ ಎಂದರೆ ಸಾಕ್ಷಿಯು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.